ಮಾನ್ಯ ಸಣ್ಣ ನೀರಾವರಿ ಯೋಜನೆ ಹಾಗೂ ಸಾಂಖ್ಯಿಕ ಸಚಿವರು.

1 ಶಿರಾ ತಾಲ್ಲೂಕಿನಲ್ಲಿರುವ ಒಟ್ಟು ದೊಡ್ಡ ಮತ್ತು ಸಣ್ಣ ಕೆರೆಗಳ ಸಂಖ್ಯೆ ಎಷ್ಟು? ಹೊಸ ಕೆರೆಗಳನ್ನು ಕಟ್ಟುವ ಬಗ್ಗೆ ಯಾವುದಾದರೂ ಯೋಜನೆ ಸರ್ಕಾರದ ಮುಂದಿದೆಯೇ?

ಶಿರಾ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 62 ಕೆರೆಗಳು ಇವೆ. ಅನುದಾನದ ಲಭ್ಯತೆಯನ್ನು ಪರಿಗಣಿಸಿಕೊಂಡು ಹೊಸಕೆರೆಗಳ ನಿರ್ಮಾಣ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

2 2004ನೇ ಸಾಲಿನಲ್ಲಿ ವಿವಿಧ ಯೋಜನೆಯಡಿಯಲ್ಲಿ ಶಿರಾ ತಾಲೂಕಿನಾದ್ಯಂತ ಹಾಲಿ ಇರುವ ಕೆರೆಗಳ ದುರಸ್ತಿಗೆ ಇದುವರೆಗೆ ಬಿಡುಗಡೆಯಾದ ಹಣವೆಷ್ಟು? (ವಿವರ ನೀಡುವುದು)

ದುರಸ್ತಿಗೆ ಮಾಡಲಾದ ವೆಚ್ಚದ ವಿವರ ಕೆಳಕಂಡಂತಿದೆ. (ವೆಚ್ಚ ಲಕ್ಷ ರೂ.ಗಳಲ್ಲಿ)

ಕ್ರ.ಸಂ.	ವರ್ಷ	ವೆಚ್ಚ
1	2004–05	44.85
2	2005–06	37.76
3	2006–07	60.12
4	2007–08	148.17
5	2008–09	00.00
	ಒಟ್ಟು	**291.90**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (379)147
ಸದಸ್ಯರ ಹೆಸರು : ಶ್ರೀ ಜಯಚಂದ್ರ ಟಿ.ಬಿ.
ಉತ್ತರಿಸುವವರು : (ಶ್ರೀ ಜಿ.ಕರುಣಾಕರ ರೆಡ್ಡಿ) ಮಾನ್ಯ ಕಂದಾಯ ಸಚಿವರು.

ಅ) ರಾಜ್ಯದಲ್ಲಿ ಬಗರ್ ಹುಕುಂ ಸಮಿತಿಯಲ್ಲಿ ಮಂಜೂರಾತಿಯಾಗಿರುವ ಜಮೀನುಗಳಿಗೆ ಮಂಜೂರಾತಿ/ಹಿಡುವಳಿ ಪತ್ರ ನೀಡಲು ಸರ್ಕಾರ ತಡೆಹಿಡಿದಿರುವುದು ನಿಜವೇ;

ಸರ್ಕಾರದ ಸತ್ತೋಲೆ ಸಂಖ್ಯೆ: ಆರ್ಡಿ 83 ಎಲ್‌ಜಿಪಿ 2006, ದಿ:05.01.2007ರಲ್ಲಿ ಈ ಕೆಳಕಂಡಂತೆ ಸೂಚನೆಗಳನ್ನು ನೀಡಲಾಗಿರುತ್ತದೆ.

1) ಗೋಮಾಳ, ಗಾಯರಾಣ, ಹುಲ್ಲುಬನ್ನಿ ಜಮೀನುಗಳ ವಿಸ್ತೀರ್ಣವು ಕರ್ನಾಟಕ ಭೂ ಕಂದಾಯ ನಿಯಮಾವಳಿಗಳ ನಿಯಮ 97(1)ಕ್ಕಿಂತ ಮೀರಿದ ಪ್ರಕರಣಗಳಲ್ಲಿ ಮಾತ್ರ ಆ ಜಮೀನಿನಲ್ಲಿ ಯಾರಾದರು ಅಕ್ರಮವಾಗಿ ಸಾಗುವಳಿ ಮಾಡಿಕೊಂಡು ಸ್ವಾಧೀನದಲ್ಲಿದ್ದು, ಅವರು ಸದರಿ ಜಮೀನನ್ನು ಪಡೆಯಲು ಅರ್ಹರಾಗಿದ್ದು, ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 94ಎ, 94ಬಿ ಮತ್ತು 94ಸಿ ರಡಿಯಲ್ಲಿ ನಿಗಧಿತ ಅವಧಿಯಲ್ಲಿ ಜಮೀನಿನ ಸಕ್ರಮೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದಲ್ಲಿ ಅವುಗಳನ್ನು ಸಕ್ರಮೀಕರಣಗೊಳಿಸಲು ಸೂಕ್ತ ನಿರ್ಧಾರದಕ್ಕಾಗಿ ಸರ್ಕಾರವು ರಚಿಸಿರುವ/ ರಚಿಸುವ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯ ಮುಂದೆ ಇಡತಕ್ಕದ್ದು.

2) ಯಾವುದೇ ಪ್ರಕರಣದಲ್ಲಿ ಗೋಮಾಳ ಜಮೀನಿನ ವಿಸ್ತೀರ್ಣ ಕರ್ನಾಟಕ ಭೂ ಕಂದಾಯ ನಿಯಮಾವಳಿಗಳ ನಿಯಮ 97(1)ಕ್ಕಿಂತ ಕಡಿಮೆ ಇದ್ದಲ್ಲಿ ಅವುಗಳು ಒತ್ತುವರಿಯಾಗಿದ್ದರೂ ಸಹ ಸಕ್ರಮಗೊಳಿಸಲು ಯಾವುದೇ ಕ್ರಮವನ್ನಾಗಲಿ ಅಥವಾ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯ ಮುಂದೆ ಇಡುವ ಕ್ರಮವನ್ನಾಗಲಿ ತೆಗೆದುಕೊಳ್ಳಬಾರದು.

ಆ) ಹಾಗಿದ್ದಲ್ಲಿ, ತಡೆ ಹಿಡಿಯಲು ಕಾರಣವೇನು; ಅದನ್ನು ಬಗೆ ಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ರಾಜ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ:14048/05ಕ್ಕೆ ಸಂಬಂಧಿಸಿದಂತೆ ದಿ:22.09.2005 ಹಾಗೂ ರಿಟ್ ಅಪೀಲ್ ಸಂ:1353/06, ಮತ್ತು ರಿಟ್ ಅರ್ಜಿ ಸಂ:3813/05, 21221/05ಕ್ಕೆ ಸಂಬಂಧಿಸಿದಂತೆ ದಿ:18.11.2006ರಂದು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಮೇಲ್ಕಂಡ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ. ಕಾನೂನು ಅಭಿಪ್ರಾಯ ಪಡೆದ ನಂತರ ಪರಿಷ್ಕೃತ ಸುತ್ತೋಲೆಯನ್ನು ಹೊರಡಿಸುವ ವಿಷಯವು ಪರಿಶೀಲನೆಯಲ್ಲಿದೆ.

ಇ) ನ್ಯಾಯಾಲಯದ ಆದೇಶ ಬರುವ ಮುಂಚೆ ಬಹಳಷ್ಟು ಜನತೆಗೆ ಸಾಗುವಳಿ ಪತ್ರವನ್ನು ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಈ) ಹಾಗಿದ್ದಲ್ಲಿ, ಸಾಗುವಳಿ ಪತ್ರವನ್ನು ಕೊಡದೇ ಇರುವುದರಿಂದ ತಾರತಮ್ಯವಾಗಿಲ್ಲವೇ; ಈ ತಾರತಮ್ಯ ನೀಗಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಕಾನೂನು ಅಭಿಪ್ರಾಯ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು.